# ಹೊಸ ತಲೆಮಾರಿನ ಕವಿಗಳನ್ನು ಕಾಡುತ್ತಿರುವ ಯುದ್ಧ ಮತ್ತು ಪ್ರಕೃತಿ ವಿನಾಶ

**ಅರುಂಧತಿ ಎಫ್. ಬದಾಮಿ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ ಸಂಸ್ಥೆಯ ಎಸ್.ವಿ.ಎಸ್ ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ.

DOI: https://doi.org/10.5281/zenodo.17258167

## ABSTRACT:

ಯುದ್ಧ ಮತ್ತು ಪ್ರಕೃತಿ ವಿನಾಶ ಇವತ್ತು ಜಗತ್ತು ಎದುರಿಸುತ್ತಿರುವ ಬಹು ದೊಡ್ಡ ಜಾಗತಿಕ ಸಮಸ್ಯೆಗಳಾಗಿವೆ. ಯುದ್ಧ ಮತ್ತು ಪ್ರಕೃತಿಯಿಂದಾಗುವ ವಿನಾಶ ರಣಭಯಂಕರವಾಗಿರುತ್ತದೆ. ಮನುಷ್ಯನ ದುರಹಂಕಾರ, ಅತೀ ಆಸೆ, ಅವನ ಕುಬ್ಜ ಮನೋವ್ಯಾಕುಲತೆಗಳು ಇದಕ್ಕೆ ಕಾರಣವಾಗಿವೆ. ಹೊಸ ತಲೆಮಾರಿನ ಕಾವ್ಯದ ಬಾಹ್ಯ ಶರೀರ ಬದಲಾವಣೆಯಾದಂತೆ ಆಂತರಿಕವಾಗಿಯೂ ಆಗಿರುವ ಅನೇಕ ಬದಲಾವಣೆಗಳನ್ನು ಗುರುತಿಸಬಹುದು. ಮತ್ತು ಇದು ಅನಿವಾರ್ಯ ಕೂಡಾ. ಏಕೆಂದರೆ ಪ್ರತಿ ಕಾಲ ಸಂದರ್ಭದ ಪ್ರತಿನಿಧಿಯಾಗಿ ಕವಿ ಪ್ರತಿಸ್ಪಂದಿಸಬೇಕಾದುದು ಕವಿಗಳ ಬಹು ದೊಡ್ಡ ಜವಾಬ್ದಾರಿ. ಸಮಾಜದಲ್ಲಿ ಹೆಚ್ಚುತ್ತಿರುವ ಹಿಂಸಾರತಿಯ ಪ್ರಹಾರ, ಅವ್ಯಾಹತವಾಗಿ ನಡೆದಿರುವ ಅತ್ಯಾಚಾರ, ಶೋಷಣೆ, ಕೋಮುವಾದದ ವಿಕ್ಷಿಪ್ತತೆ, ಅರಾಜಕತೆ ಇತ್ಯಾದಿಗಳನ್ನು ಇಂದಿನ ಸಮಾಜ ಗರ್ಭೀಕರಿಸಿಕೊಂಡಿದೆ. ಇಂತಹ ಅನಾರೋಗ್ಯಕರ ಸಮಾಜಕ್ಕೆ ಔಷಧ ಖಡ್ಗಕ್ಕಿಂತಲೂ ಪ್ರಬಲ ಅಸ್ತ್ರವಾದ ಲೇಖನಿಯಿಂದ ಸಿಗಬೇಕಿದೆ. ಮತ್ತು ಈ ಹಿನ್ನಲೆಯಲ್ಲಿಯೇ ಇವತ್ತಿನ ಬಹುತೇಕ ಸಾಹಿತ್ಯಿಕ ಕೃಷಿಯೂ ಸೃಷ್ಟಿಯಾಗಿದೆ. ಇದು ಪ್ರಸ್ತುತ ತಲೆಮಾರು ಕಂಡು ಎದುರಿಸಿದ ಅತ್ಯಂತ ಭಯಾನಕವಾದ ಸತ್ಯ. ಅದುವೇ ಇಡೀ ಜಗತ್ತನ್ನೇ ತಲ್ಲಣಗೊಳಿಸಿರುವ ಯುದ್ಧದ ತೀವ್ರತೆ, ಭಯಾನಕತೆ. ಈ ಬಗ್ಗೆ ಅನೇಕ ಕವಿಗಳು ತಮ್ಮ ಕವನಗಳ ಮೂಲಕ ಆ ಭೀಕರತೆಯ ಸಂಕಟವನ್ನು ವಿಷಾದತೆಯನ್ನು ಹೊರಚಲ್ಲಿದ್ದಾರೆ. ಕಾರ್ಗಿಲ್, ಇರಾಕ್-ಅಮೇರಿಕಾ, ಇರಾನ್-ಇರಾಕ್, ಕ್ಯೂಬಾ-ಅಮೇರಿಕಾ, ಪ್ಯಾಲೆಸ್ತೇನ್-ಇಸ್ರೆಲ್, ಉಕ್ರೇನ್- ರಷ್ಯಾ, ಗಾಜಾಪಟ್ಟಿ ಹೀಗೆ ಇಂದಿನ ತಲೆಮಾರು ಅನೇಕ ಯುದ್ಧಗಳನ್ನು ಮತ್ತು ಅದರ ಪರಿಣಾಮಗಳನ್ನು ತಮ್ಮ ಕವನಗಳಲ್ಲಿ ಕಂಡರಿಸಿದ್ದಾರೆ. ನೀರು, ಪ್ರಕೃತಿ ವಿನಾಶ, ರಕ್ಷಣೆ ಈ ಎಲ್ಲದರ ಕುರಿತು ತಮ್ಮ ಕವನಗಳ ಮೂಲಕ ಅಭಿವ್ಯಕ್ತಿಸಿದ್ದಾರೆ.

## KEYWORDS:

ಆಧುನಿಕ ತಲೆಮಾರು, ಕವಿಗಳು, ಸಮಾಜ, ಯುದ್ಧ, ಶಾಂತಿ, ಪ್ರಕೃತಿ, ಜಲಯುದ್ಧ, ಅಸಹಾಯಕರು.

ಸಾಹಿತ್ಯ ಆಯಾ ಕಾಲಘಟ್ಟದ ಸಾಕ್ಷಿಪ್ರಜ್ಞೆಯಾಗಿ, ಸಮಕಾಲೀನ ಸಮಾಜದ ಪ್ರತಿನಿಧಿಯಾಗಿ ಅಂದಂದಿನ ವ್ಯವಸ್ಥೆಯನ್ನು ಅತ್ಯಂತ ಸೂಕ್ಷ್ಮವಾಗಿ ಅಕ್ಷರಗಳ ಮುಖೇನ, ಸಹೃದಯಿಗಳ ಮನಸ್ಸನ್ನು ಆವರಿಸಿಕೊಂಡು ಆಯಾ ಕಾಲಘಟ್ಟದಲ್ಲಿ ಕಳೆದು ಹೋಗುವಂತೆ ಮಾಡುತ್ತದೆ. ಸಾಹಿತ್ಯ ಆಯಾ ಕಾಲದ ಸಾಮಾಜಿಕ, ಧಾರ್ಮಿಕ, ಕೌಟುಂಬಿಕ, ರಾಜಕೀಯ ಹೀಗೆ ಇನ್ನು ಅನೇಕ ಸೂಕ್ಷ್ಮ ಚಹರೆಗಳನ್ನು ಅನಾವರಣ ಮಾಡುತ್ತಾ ಬಂದಿದೆ. ಕಾವ್ಯದ ದೇಹರಚನೆಯ ದೃಷ್ಟಿಯಿಂದ ಗಮನಿಸಿದಾಗ ಕಾವ್ಯ ಎಂದರೇನು? ಕಾವ್ಯ ಪ್ರಯೋಜನಗಳೇನು? ಅದರ ಗುಣಲಕ್ಷಣಗಳೇನು? ಸಹೃದಯರು ಎಂದರೆ ಯಾರು? ಹೀಗೆ ಕಾವ್ಯಮೀಮಾಂಸೆಯ ತತ್ವವನ್ನು ಅಲಂಕಾರ ಲಯ, ಯತಿ ಪ್ರಾಸ ಇವುಗಳ ಎಳೆಯನ್ನು ಹಿಡಿದುಕೊಂಡು ಇಂದಿನ ಹೊಸ ತಲೆಮಾರಿನ ಕಾವ್ಯಗಳನ್ನು ರಸಗ್ರಹಣ ಮಾಡಿದರೆ ಬಹುತೇಕ ನಮಗೆ ಉತ್ತರ ನಿರಾಶಾದಾಯಕವಾಗಿರುತ್ತದೆ. “ಬೇಡ ನಮಗೆ ಬಂಧಗಳ ಬಂಧಿವಾಸ...” ಎಂದು ಮುಕ್ತ ಛಂದಸ್ಸಿನ ಪ್ರಭಾವವು ಇದಕ್ಕೆ ಕಾರಣವಾಗಿರಬಹುದು. ಇಂದಿನ ಸಮಾಜವನ್ನು ಭೀಕರವಾಗಿ ಕಾಡುತ್ತಿರುವ ಹಿಂಸಾರತಿ, ಧರ್ಮಾಂಧತೆ, ಅತ್ಯಾಚಾರ, ರಾಜಕೀಯ ಅರಾಜಕತೆ, ಸ್ವೇಚ್ಚಾಚಾರ, ಅಭಿವ್ಯಕ್ತಿ ಸ್ವಾತಂತ್ರ್ಯದ ನೆಪದಲ್ಲಿ ಸಮಾಜದಲ್ಲಿ ಬುಗಿಲೆದ್ದಿರುವ ಅನಾರೋಗ್ಯಕರ ವಾತಾವರಣಗಳು ಇಂದಿನ ಕವಿಗಳ ಕಾವ್ಯದ ಪರಿಕರಗಳಾಗಿವೆ. ಅಂದಂದಿನ ಬರಹಗಾರರು ಅಂದಂದಿನ ಸಮಾಜ ಎದುರಿಸಿದ ಸುಖ, ಸಂತೋಷ, ಸಾಮಾಜಿಕ, ಧಾರ್ಮಿಕ, ರಾಜಕೀಯ ಇನ್ನಿತರ ಬಿಕ್ಕಟ್ಟುಗಳನ್ನು, ತಮ್ಮ ಲೇಖನಿಯಿಂದ ಹಿಡಿದಿರಿಸಿ ಮುಂದಿನ ತಲೆಮಾರುಗಳಿಗೆ ಪ್ರಸರಣ ಮಾಡಿದ್ದಾರೆ. ಈ ಸಮಸ್ಯೆ, ಬಿಕ್ಕಟ್ಟುಗಳ ಜೊತೆಗೆ ಸಾಮಾಜಿಕ, ರಾಜಕೀಯ, ಆರ್ಥಿಕ ಹೀಗೆ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಅನೇಕ ಅಂಶಗಳನ್ನು ಧನಾತ್ಮಕ ರೀತಿಯಲ್ಲಿ ಗಮನಿಸಿ ಅದನ್ನೂ ತಮ್ಮ ಕಾವ್ಯದ ವಸ್ತುವನ್ನಾಗಿಸಿಕೊಳ್ಳುವ ಅವಶ್ಯಕತೆಯಿದೆ. ಇಡೀ ಜಗತ್ತು ಜಾಗತೀಕರಣ, ಡಿಜಿಟಲೀಕರಣ, ಖಾಸಗೀಕರಣ, ಉದಾರೀಕರಣದಿಂದಾಗಿ ಕನಸಲ್ಲೂ ಊಹಿಸಲಾರದಷ್ಟು ತಾಂತ್ರಿಕತೆ, ವೈಜ್ಞಾನಿಕ ಬೆಳವಣಿಗೆ ಅದರ ಜೊತೆಗೆ ಮನುಷ್ಯ ಸಂಬಂಧಗಳಲ್ಲಿ ಉಂಟಾಗುತ್ತಿರುವ ವಿಕ್ಷಿಪ್ತತೆ, ಕುಬ್ಜತೆ, ಹತ್ತಿರವಿದ್ದು ದೂರ ನಿಲ್ಲುತ್ತಿರುವ ಯಾಂತ್ರಿಕ ಮನೋಭಾವ, ಯುದ್ಧದ ಭೀಕರತೆ ಇನ್ನೂ ಮುಂತಾದ ಅಂಶಗಳು ಇಂದಿನ ತಲೆಮಾರಿನ ಕವಿಗಳನ್ನು ಕಾಡುತ್ತಿರುವುದನ್ನು ಅವರ ಕವನಗಳಲ್ಲಿ ಕಾಣುತ್ತೇವೆ. ಜಗತ್ತು ಇವತ್ತು ಅಂಗೈಯಲ್ಲಿ ನಿಂತಿದೆ. ಎತ್ತರಕ್ಕೆರಿದಷ್ಟು ಮನುಷ್ಯ ಅವನಿಗೇ ಗೊತ್ತಿಲ್ಲದಂತೆ ಪಾತಾಳಕ್ಕಿಳಿದಿದ್ದಾನೆ. ಅವನು ನಿಂತ ನೆಲ ಕುಸಿದುಹೋಗುತ್ತಿರುವುದನ್ನೂ ಅವನು ಗಮನಿಸುತ್ತಿಲ್ಲ. ಸಮಾಜದಲ್ಲಿ ಹೆಚ್ಚುತ್ತಿರುವ ಹಿಂಸಾರತಿಯ ಪ್ರಹಾರ, ಅವ್ಯಾಹತವಾಗಿ ನಡೆದಿರುವ ಅತ್ಯಾಚಾರ, ಶೋಷಣೆ, ಕೋಮುವಾದದ ವಿಕ್ಷಿಪ್ತತೆ, ಅರಾಜಕತೆ ಇತ್ಯಾದಿಗಳನ್ನ ಇಂದಿನ ಸಮಾಜ ಗರ್ಭೀಕರಿಸಿಕೊಂಡಿದೆ. ಇಂತಹ ಅನಾರೋಗ್ಯಕರ ಸಮಾಜಕ್ಕೆ ಔಷಧ ಖಡ್ಗಕ್ಕಿಂತಲೂ

ಪ್ರಬಲ ಅಸ್ತ್ರವಾದ ಲೇಖನಿಯಿಂದ ಸಿಗಬೇಕಿದೆ. ಮತ್ತು ಈ ಹಿನ್ನಲೆಯಲ್ಲಿಯೇ ಇವತ್ತಿನ ಬಹುತೇಕ ಸಾಹಿತ್ಯಿಕ ಕೃಷಿಯೂ ಸೃಷ್ಟಿಯಾಗಿದೆ. ಇದು ಪ್ರಸ್ತುತ ತಲೆಮಾರು ಕಂಡು ಎದುರಿಸಿದ ಅತ್ಯಂತ ಭಯಾನಕವಾದ ಸತ್ಯ. ಅದುವೇ ಇಡೀ ಜಗತ್ತನ್ನೇ ತಲ್ಲಣಗೊಳಿಸಿರುವ ಯುದ್ಧದ ತೀವ್ರತೆ, ಭಯಾನಕತೆ. ಈ ಬಗ್ಗೆ ಅನೇಕ ಕವಿಗಳು ತಮ್ಮ ಕವನಗಳ ಮೂಲಕ ಆ ಭೀಕರತೆಯ ಸಂಕಟವನ್ನು ವಿಷಾದತೆಯನ್ನು ಹೊರಚಲ್ಲಿದ್ದಾರೆ. ಕಾರ್ಗಿಲ್, ಇರಾಕ್–ಅಮೇರಿಕಾ, ಇರಾನ್–ಇರಾಕ್, ಕ್ಯೂಬಾ–ಅಮೇರಿಕಾ, ಪ್ಯಾಲೆಸ್ತೇನ್–ಇಸ್ರೆಲ್, ಉಕ್ರೇನ್– ರಷ್ಯಾ, ಗಾಜಾಪಟ್ಟಿ ಹೀಗೆ ಇಂದಿನ ತಲೆಮಾರು ಅನೇಕ ಯುದ್ಧಗಳನ್ನು ಮತ್ತು ಅದರ ಪರಿಣಾಮಗಳನ್ನು ಕಂಡಿದೆ.

ಇಸ್ರೇಲ್ ಮತ್ತು ಪ್ಯಾಲೆಸ್ತೇನ್ ನಡುವೆ ನಡೆದ ಯುದ್ಧ ಆ ಇಡೀ ಗಾಜಾಪಟ್ಟಿಯನ್ನೇ ಸರ್ವನಾಶ ಮಾಡಿತು. ಶಾಂತಿ, ಸಹನೆ, ಕರುಣೆಯ ರೂಪವೇ ಆಗಿದ್ದ ಏಸು ಜನಿಸಿದ ನಾಡಿನಲ್ಲೂ ನೆತ್ತರ ನೀರಿನಂತೆ ಹರಿದಿರುವುದನ್ನು ಅಲ್ಲಿಯ ಅಸಹಾಯಕತೆಯನ್ನು ಜಿ.ಪಿ.ಬಸವರಾಜು ತಮ್ಮ ಕವನದಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ.

“ಯುದ್ಧವೆಂಬುದು ತೀರದ ಬಾಯಾರಿಕೆ ಯುಗಯುಗ ಕಳೆದರೂ/ ಮತ್ತೆ ಮತ್ತೆ ನೆತ್ತರನು ಕುಡಿದರು ಕೊನೆಯಾಗುವುದೇ ಇಲ್ಲ / ಏಸು ಹರಿಸಿದ ನೆತ್ತರಿನ್ನೂ ಆರಿಲ್ಲ. ಹಸಿಯಾಗಿಯೇ ಇವೆ ಗಾಯ/ ಪವಿತ್ರ ನೆಲದಲ್ಲಿ ಬೆಳೆದಿಲ್ಲ ಹಸಿರು. ಅದು ಈಗಲೂ ಬರಡು”[1]

ಜೆ.ಕಲೀಂ ಬಾಷ ಅವರು ಈ ಯುದ್ಧದ ಬಗ್ಗೆ ಹೀಗೆ ಹೇಳಿದ್ದಾರೆ. ಅತೃಪ್ತ ಅಪಕ್ವ ಅಪ್ರಬುದ್ಧ/ ರಾಜಕಾರಣಿಗಳ ವಿನಾಶದ ರಂಗಸ್ಥಳಗಳು/ ಅನ್ಯರ ನೆಲವ ಆಕ್ರಮಿಸುವ/ ತನ್ನದೇ ಆಧಿಪತ್ಯ ಸಾಧಿಸುವ/ ತಾವೇ ಶ್ರೇಷ್ಠರೆಂದು ಬಿಂಬಿಸುವ/ ಬಾಂಬು ಬಂದೂಕು ಮಿಸೈಲುಗಳ ಬಳಸಿ/ ಮಾನವ ಕುಲವನ್ನೇ ಸರ್ವನಾಶ ಮಾಡುವ/ ರಕ್ಕಸ ಹುನ್ನಾರಗಳು!”[2]

ಈಳಂ ಹೋರಾಟದ ತಮಿಳುಭಾಷೆಯ ಕವಿ ಚೇರನ್ ರುದ್ರಮೂರ್ತಿ ಎಂಬತ್ತರ ದಶಕದಲ್ಲಿ ತಾವು ಪತ್ರಕರ್ತರಿದ್ದಾಗ ಕಂಡ ಶ್ರೀಲಂಕಾದ ನಾಗರಿಕ ಯುದ್ಧದ ಬರ್ಬರ ಘಟನೆಗಳನ್ನು ನಮ್ಮೊಂದಿಗೆ ಹಂಚಿಕೊಂಡಾಗ ಹುಟ್ಟಿಕೊಂಡ ಕವಿತೆ. ಪುಟ್ಟ ಪುಟ್ಟ ಮಣ್ಣಿನ ಬಟ್ಟಲುಗಳಲ್ಲಿ ನೀರು ತುಂಬಿಡುವ ಆ ಮಹಾತಾಯಿಯ ಘಟನೆಯನ್ನು ಅವರೇ ಹೇಳಿದ್ದು. 'ಇದನೆಂದೂ ನಾ ಕವಿತೆ ಮಾಡಲಾರೆ. ಆ ಶಕ್ತಿಯನ್ನು ದೇವರು ನನಗಿನ್ನೂ ಕೊಟ್ಟಿಲ್ಲವೆಂದು ಹೇಳಿದರು. ಏಕೆಂದರೆ ಚೇರನ್ ಶ್ರೀಲಂಕಾದ ಜನಾಂಗೀಯ ಕಲಹದಲ್ಲಿ ತಮ್ಮ ಎಂಭತ್ತೇಳು ಜನ ಸಂಬಂಧಿಕರನ್ನು ಕಳೆದುಕೊಂಡಿದ್ದಾರೆ. ಪ್ರಸ್ತುತ ಈ ಕವಿ ಕೆನಡಾದ ವಿಂಡ್ಸರ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ”[3]

ಇವರ 'ಚೇರನ್ ಹೇಳಿದ ಕವಿತೆ' ಯುದ್ಧದ ಸನ್ನಿವೇಶದಲ್ಲಿ ಸ್ತ್ರೀಯರ, ಮಕ್ಕಳ

ಅಸಹಾಯಕರ ಪರಿಸ್ಥಿತಿ ಸಂಕಟ ಉಂಟುಮಾಡುತ್ತದೆ. ಅವರು ಹೇಳುತ್ತಾರೆ

"ಮನುಷ್ಯತ್ವವೆಂಬುದು ಸಂಪೂರ್ಣವಾಗಿ ಲಕ್ವಾ ಹೊಡೆದ/ ಶಹರದೊಳಗೆ/ ಶಾಂತಿಯ ಹೆಸರಿನಲಿ ಕವಾಯತು ನಡೆಸುವ/ ಬಾಡಿಗೆ ಸೈನ್ಯ ಬೂಟುಗಾಲಿನ ಮುಂದೆ ಬೊಗಸೆ ನೀರಿಗಾಗಿ/ ಸೆರೆಗೊಡ್ಡಿ ಬೇಡುವ ತಾಯಿ ಆವತ್ತು ಅಲ್ಲಿ/ ರಣಬಿಸಿಲ ರಸ್ತೆ ಬದಿಯ ಕೊನೆಯಲ್ಲಿ/ ನೀರು ನೀರೆಂದು ಗುಟುಕು ನೀರಿಗಾಗಿ/ ಬಿಕ್ಕುತ್ತಿರುವ ಕೂಸನ್ನು ಬೆನ್ನಿಗೇರಿಸಿಕೊಂಡು/ ಬೂಟುಗಾಲಿಗೆ ಒಡದಂತೆ ತೆಕ್ಕೆಬಿದ್ದ/ ಆ ತಾಯಿಯನು ಚಿಮ್ಮಿ ನಡೆದು ಹೋದ ನರಸೈನ್ಯ/ ಬಿಕ್ಕಿ ಬಿಕ್ಕಿ ಸತ್ತ ಯುದ್ಧ ಸಂತ್ರಸ್ತ ಮಗು ಕ್ಷುಲ್ಲಕ ಕಾರಣಗಳಿಗಾಗಿ ಬೀದಿಯಲಿ ಚೆಲ್ಲುವ ರಕ್ತ/ ಮತ್ತದರ ಕಲೆಗಳಿಗಾಗಿ ಬೀದಿಯಲಿ ಚೆಲ್ಲುವ ರಕ್ತ/ ಮತ್ತದರ ಕಲೆಗಳನ್ನು ನೆಕ್ಕುವ ಸೂರ್ಯನ ನಾಳೆಗೆ/ ನಮ್ಮ ನಿಮ್ಮ ಕನಸೊಳಗೆ/ ಬೊಗಸೆ ನೀರಿಗಗಿ ಆ ಪರಿ ಅಂಗಲಾಚುವ/ ಆ ತಾಯಿಯ ನಿರೂಪ" ಮುಂದೆ ಕೇಳುತ್ತಾರೆ. "ಮಹಾಕವಿಗಳೇ, ಯಾವುದಾದರೊಂದು ಹೆಸರು ಕೊಡಿ ಈ / ಅ–ಭಾವಕ್ಕೆ"[4]

ಯುದ್ಧದಲ್ಲಿ ಸೋತವನು ಸತ್ತಂತೆ ಮತ್ತು ಗೆದ್ದವನು ಸೋತಂತೆ ಏಕೆಂದರೆ ಅದರ ಪರಿಣಾಮವೇ ಭಯಾನಕವಾದುದು. ಯುದ್ಧದ ಕಾರಣದಿಂದಾಗಿ ತತ್ತರಿಸಿಹೋದವರು ಸ್ತ್ರೀಯರು ಮತ್ತು ಮಕ್ಕಳು. ಈ ಕಾರಣದಿಂದಾಗಿ ಜಗತ್ತು ಯುದ್ಧದಿಂದ ಆಚೆಗೆ ಬರಬೇಕೆಂದರೆ ವಿಶ್ವಮಾನವ್ಯತೆಯ ತತ್ವವನ್ನು ಅಳವಡಿಸಿಕೊಳ್ಳಬೇಕು. ಯುದ್ಧ ಜಗತ್ತಿನ ಯಾವ ಭಾಗದಲ್ಲಾದರೂ ನಡೆಯಲಿ ಮಾನವ ಹೃದಯ ಸಂಕಟ ಪಡುತ್ತದೆ. ಅದರ ಪರಿಣಾಮ ಇಡೀ ಜಗತ್ತಿನ ಮೇಲಾಗುತ್ತದೆ.

"ರಕ್ತ ನಮ್ಮದಾದರೇನು, ಅವರದಾದರೇನು/ ಒಟ್ಟಿನಲ್ಲದು ಮನುಷ್ಯರದ್ದೇ/ ಯುದ್ಧ ಪೂರ್ವದಲ್ಲಾದರೇನು, ಪಶ್ಚಿಮದಲ್ಲಾದರೇನು/ ಕುಸಿಯುವುದು ಶಾಂತಿನಿಕೇತನವೇ/"[5]

ಸಾಹಿರ್ ಲೂಧಿಯಾನ್ವಿಯವರ ಈ ಮಾತು ಗಮನಾರ್ಹವಾದುದು. ಮತ್ತು ಇಡೀ ಜಗತ್ತು ಇಂತಹ ಮಾತುಗಳನ್ನು ಕೇಳಿಸಿಕೊಳ್ಳಬೇಕಾದ ಅಗತ್ಯವಿದೆ. ಈಗಾಗಲೇ ಎರಡು ಮಹಾಯುದ್ಧಗಳನ್ನು ಕಂಡ ಜಗತ್ತು ಅದರ ಭೀಕರತೆಯಿಂದ ತತ್ತರಿಸಿ ಹೋಗಿದೆ. ಯುದ್ಧ ಜಗತ್ತಿನ ಯಾವ ಭಾಗದಲ್ಲಿಯೇ ಆಗಿರಲಿ. ಅದರ ಪರಿಣಾಮ ಘೋರವಾಗಿರುತ್ತದೆ. ಈ ಭೀಕರತೆಯನ್ನು ಕವಿ ಮನಸ್ಸು ಯಾವ ಕಾಲಕ್ಕೂ ತನ್ನ ಅಂತಃಚಕ್ಷುವಿನಿಂದ ಕಂಡು ಪ್ರತಿಸ್ಪಂದಿಸುತ್ತಾ ಬಂದಿದೆ.

ಕವಯತ್ರಿ ಸವಿತಾ ನಾಗಭೂಷಣ ಅವರು ಯುದ್ಧದ ಕುರಿತಾಗಿ "ಬೇಡ ಯುದ್ಧ' ಎಂಬ ಕವನದಲ್ಲಿ ಹೀಗೆ ಹೇಳುತ್ತಾರೆ: ಬಂದೂಕು ಎತ್ತಿಕೊಳ್ಳುವ ಮೊದಲೇ/

ಬಿಳಿಯ ಪಾರಿವಾಳಗಳು ಹಾರಿ ಬರಲಿ/ ಗೋಡೆ ಏಳುವ ಮುನ್ನವೇ/ ಸೇತುವೆ ಕಟ್ಟುವಂತಾಗಲಿ"[6] ಎಂದು ಶಾಂತಿಯ, ನೆಮ್ಮದಿಯ, ಸಾಮರಸ್ಯದ ಬದುಕನ್ನು ಬಯಸುತ್ತಾರೆ.

ಮಾನವನ ಅತೀ ಆಸೆಯಿಂದಾಗಿ ಭೂಮಂಡಲದ ಸಾಮ್ರಾಜ್ಯ ತಾನೊಬ್ಬನೇ ಅನ್ನುವ ರೀತಿಯಲ್ಲಿ ಇಡೀ ಪ್ರಕೃತಿಯನ್ನು ತನ್ನ ಮನಸಿಚ್ಚೆ ಬಗೆದು ಕೊಂದು ಹಾಕುತ್ತಿದ್ದಾನೆ. ಭೂಮಿ, ಆಕಾಶ, ಜಲ ಯಾವುದರ ಪರಿವೆಯೂ ಅವನಿಗಿಲ್ಲ. ತನ್ನ ಜೊತೆಗೆ ಇನ್ನಿತರ ಸಹಜೀವಿಗಳೂ, ಪಶು ಪಕ್ಷಿ ಜಲಚರಗಳೂ ವಾಸಿಸುತ್ತಿವೆ. ಅವುಗಳಿಗೂ ಬದುಕಿದೆ, ಬದುಕುವ ಹಕ್ಕಿದೆ ಎಂಬ ಯಾವ ಪರಿಜ್ಞಾನವೂ ಮನುಷ್ಯನಿಗಿಲ್ಲ. ಗಿಡಗಳನ್ನು ಕಡಿದಿದ್ದರ ಪರಿಣಾಮ ಮಣ್ಣು ಸಡಿಲಾಗಿದೆ. ಕಾಡು ಬರಿದಾಗುತ್ತಾ ಸಾಗಿದೆ. ಕಾಂಕ್ರೀಟ್ ಕಾಡಿನ ಪರಿಣಾಮ ಮಳೆ ಸುರಿದರೂ ಅಂತರ್ಜಲ ಸಂಗ್ರಹವಾಗದ ಸ್ಥಿತಿ ನಿರ್ಮಾಣವಾಗಿದೆ. ಕೈಗಾರಿಕೆಗಳ ದಟ್ಟ ಹೊಗೆಯಿಂದ ಇಡೀ ವಾತಾವರಣ ಕಲುಷಿತಗೊಂಡಿದೆ. ಭೂಮಿ, ಆಕಾಶ, ನೀರು ಎಲ್ಲವೂ ಕಲುಷಿತಗೊಳ್ಳುತ್ತಿದೆ. ಇದರ ಪರಿಣಾಮ ಹೊಸ ಹೊಸ ರೋಗಗಳು ಉಲ್ಬಣಿಸುತ್ತಿವೆ.

"ವಿಷ ತುಂಬಿದ ನಾವು ವಿಷವಾಗಿಸಿದೆವೆಲ್ಲಾ/ ಆಸೆಗೆ ಮಿತಿಗೊಡದೆ ಕೊನೆಗಾಣಿಸಿದೆವೆಲ್ಲಾ/ ಭೂತಾಯ ಕೊರೆಕೊರೆದು ಪಾತಾಳಕ್ಕಿಳಿಸಿದೆವು ಬರಿದಾಯಿತು/ ಭೂಮಿಯ ಒಡಲೆಲ್ಲ / ಖನಿಜ, ತೈಲ, ಗಣಿಗಾರಿಕೆಯ ನೆಪಹೂಡಿ/ ಫಲವಂತ ಪೃಥ್ವಿಯ ಪೀಡಿಸಿದೆವಲ್ಲ/ ಹಚ್ಚಹಸುರಿಗೆ ಹೊಸೆದ ಮಚ್ಚನಿಟ್ಟು/ ಕತ್ತರಿಸಿದೆವು ಎಷ್ಟೋ ಬದುಕನೆಲ್ಲ/"[7] ಎಂದು ಕವಿ ಇವತ್ತಿನ ಮನುಷ್ಯನ ಅತಿಕ್ರಮಣದ ಬಗ್ಗೆ ಹೇಳುತ್ತಾನೆ.

ಇನ್ನೊಂದು ಘಟಿಸಬಹುದಾದ ಭಯಾನಕ ಸಮಸ್ಯೆಯೆಂದರೆ ನೀರಿಗಾಗಿ ಯುದ್ಧ. ಜಗತ್ತಿನಲ್ಲಿ ಹೆಣ್ಣು ಹೊನ್ನು ಮಣ್ಣಿಗಾಗಿ ಧರ್ಮಕ್ಕಾಗಿ ಭಯಾನಕ ಯುದ್ಧಗಳಾಗಿರುವುದನ್ನು ಇತಿಹಾಸ ನಮಗೆ ಹೇಳಿದೆ. ಇನ್ನು ಜಗತ್ತಿನಲ್ಲಿ ಮೂರನೇ ಯುದ್ಧವಾದರೆ ಅದು ನೀರಿಗಾಗಿ ಎನ್ನುವ ಮಾತಿದೆ. ಒಟ್ಟು ಭೂಮಿಯಲ್ಲಿರುವ ನೀರಿನಲ್ಲಿ ಕುಡಿಯಲು ಯೋಗ್ಯವಾದ ನೀರಿನ ಪ್ರಮಾಣವಿರುವುದು ಕೇವಲ 1.2% ನಷ್ಟು ಮಾತ್ರ. ಇದು ಗೊತ್ತಿದ್ದರೂ, ನೀರಿನ ಕೊರತೆಯಿಂದಾಗಿ ಸಾಕಷ್ಟು ಆಹಾಕಾರವನ್ನು ಅನುಭವಿಸಿದ್ದರೂ ಜನರು ಕುಡಿಯುವ ನೀರನ್ನು ಪೋಲು ಮಾಡುವುದನ್ನು ಬಿಟ್ಟಿಲ್ಲ. ಅಂತೆಯೇ ವಿಜ್ಞಾನಿ ಡಾ.ವಿರುಪಾಕ್ಷ ಬಣಕಾರ ಅವರು 'ಜಲಯುದ್ಧ' ಎನ್ನುವ ಕವನದಲ್ಲಿ ಜಲಯುದ್ಧದ ರಣ ಕಹಳೆಯಿಂದ ಆಗುತ್ತಿರುವ ಮತ್ತು ಆಗಬಹುದಾದ ಭೀಕರತೆಗಳ ಕುರಿತು ಎಚ್ಚರಿಸುತ್ತಾರೆ.

"ಹೊನ್ನು ಮಣ್ಣಿಗಾಗಿ ಅಲ್ಲ/ ಹೊಟ್ಟೆಗೆ ಹಿಟ್ಟಿಗಾಗಿ ಅಲ್ಲ/ ಅಶ್ವಮೇಧವೂ ಅಲ್ಲ/ ದಹಿಸುತ್ತಿರುವ ದಾಹಕ್ಕೆ/ ಮೊಳಗುತಿದೆ ನೋಡು/ ಜಲಯುದ್ಧದ ರಣಕಹಳೆ

ಹಳ್ಳ ನದಿಗಳ ಕತ್ತು ಹಿಚುಕಿ ನಾಶಿತು ಬೃಹತ್ ನಗರ/ ಕೆರೆಹೊಂಡಗಳ ಸಮಾಧಿ ಕಟ್ಟಿ/ ಕಾಂಕ್ರೀಟ್ ಮಾಡಿತು ಪ್ರಹಾರ/ ಮೊಳಗುತಿದೆ ನೋಡು/ ಜಲಯುದ್ಧದ ರಣಕಹಳೆ

ಸೂರ್ಯ ಕೆಂಡಾಮಂಡಲ/ ಪಶುಪಕ್ಷಿಗಳು ಕಂಗಾಲ/ ಹನಿಹನಿ ನೀರಿಗಾಗಿ/ ಹೋಮಯಜ್ಞ ಯಾಗ/ ಕತ್ತೆಗಳ ಪಾದಪೂಜೆ/ ಮಂಡೂಕಗಳ ಮದುವೆ/ ಮೊಳಗುತಿದೆ ನೋಡು/ ಜಲಯುದ್ಧದ ರಣಕಹಳೆ

ಕರುಣೆ ತೋರಿದ ವರುಣ/ ಕೊಚ್ಚಿ ಹೋದವು ನಗರ/ ಅಂತರ್ಜಲಕೆ ಹಾದಿ ಇಲ್ಲ/ ನೀರು ನಿಲ್ಲಲು ಕೆರೆಯಿಲ್ಲ/ ಮೊಳಗುತಿದೆ ನೋಡು/ ಜಲಯುದ್ಧದ ರಣಕಹಳೆ

ನಾ ಕೊಟ್ಟ ವರಗಳ ಕಾಪಾಡಿಕೋ ಮೂರ್ಖ/ ತಪ್ಪಿದರೆ ಮಹಾ ಅನರ್ಥ ಚೀತ್ಕರಿಸಿದಳು ಭೂಮಾತೆ/ ಮೊಳಗುತಿದೆ ನೋಡು/ ಜಲಯುದ್ಧದ ರಣಕಹಳೆ''[8]

ಇವತ್ತಿನ ತಲೆಮಾರು ಯಾರೂ ಸಾಧಿಸಲಾರದ್ದನ್ನು ತಾನು ಸಾಧಿಸಬೇಕೆಂದು, ಎಲ್ಲರನ್ನೂ ಹಿಂದಿಕ್ಕಿ ಸಾಧಿಸುವ ಭರಾಟೆಯಲ್ಲಿದ್ದಾರೆ. ಅವರಿಗೆ ವಿಶ್ರಾಂತಿಯ ಕಡೆ ಗಮನವೇ ಇಲ್ಲ. ಕೀರ್ತಿ, ಹಣ, ಅಂತಸ್ತು ಇತ್ಯಾದಿಗಳ ಹಪಾಹಪಿಯಲ್ಲಿ ಮನುಷ್ಯ ಸಂಬಂಧಗಳಿಂದ ದೂರ ಉಳಿಯುತ್ತಾ ಸಾಗಿರುವ ಜನ ಒಂದು ಕಡೆ ಇದ್ದರೆ ಇನ್ನೊಂದು ಕಡೆ ತಮ್ಮಷ್ಟಕ್ಕೆ ತಾವು ತಣ್ಣಗೆ ತಮಗೆ ನಿಲುಕುವಷ್ಟು ಸಾಧನೆಯನ್ನು ಸದ್ದಿಲ್ಲದೆ ಮಾಡುತ್ತಾ ಸಾಗುತ್ತಿರುವ ವೃಂದವೂ ಇದೆ. ಇದು ಇಂದಿನ ತಲೆಮಾರಿನ ಸತ್ಯ. ಇಂತವರ ಧ್ವನಿಯಾಗಿ ಅಮರೇಶ ನುಗಡೋಣಿ ಅವರು ಹೀಗೆ ಹೇಳುತ್ತಾರೆ. ``ಅದೆಷ್ಟು ಸಲ ನಿನ್ನನ್ನು/ ಸರಿಸಿ ಸರಿಸಿ/ ಮುಂದೆ ಹೋಗುತ್ತೇನೆ/ ಹಿಂದೆ ಬೀಳಬಾರದೆಂದು. / ಅದರೂ ಬಹುದೂರ ನಡೆದಿರುವೆ ಎಂಬ ಬಿಗುಮಾನ/ ಆದರೆ ಒಳ ಒಳಗೆ ಬರೀ ದಣಿಯುತ್ತಲೇ ಇರುವೆ. / ಹಿಂದಿರುಗಿ ನೋಡಿದರೆ/ ನನ್ನ ಒಂದು ಹೆಜ್ಜೆಯಷ್ಟೇ ಹಿಂದಿರುವಿ ನೀನು. ಆದರೆ ನಿನ್ನ ನಡಿಗೆಯಲ್ಲಿ ದಣಿವಿಲ್ಲ/ ಬರೀ ಸಂತಸ ತುಂಬಿದೆಯಲ್ಲ![9] ಇವತ್ತಿನ ಆಧುನಿಕ ತಲೆಮಾರು ಕವಿ ಹೇಳುವ ಹಾಗೆ ಯಾರನ್ನೊ ಹಿಂದಿಕ್ಕಿ ಬೃಹತ್ತಾದುದನ್ನೇನನ್ನೊ ಸಾಧಿಸುತ್ತೇನೆಂದು, ಎಷ್ಟು ಸಾಧಿಸಿದರೂ ತೃಪ್ತಿಯಿಲ್ಲದಿರುವುದನ್ನು, ಆದರೆ ಸಾಧಿಸಿದರೂ ಸಂತಸವಿಲ್ಲದಿರುವುದನ್ನು ಕವಿ ಗುರುತಿಸುವಲ್ಲಿ ಮನೋಯುದ್ಧ ಶೀತಲವಾಗಿ ಜರಗುತ್ತಿರುವುದನ್ನು ಕಾಣುತ್ತೇವೆ.

ಈ ರೀತಿಯಾಗಿ ಇಂದಿನ ಜ್ವಲಂತ ಸಮಸ್ಯೆಗಳ ಕುರಿತು ಇಂದಿನ ತಲೆಮಾರು ಸಾಹಿತ್ಯ ಕೃಷಿ ಮಾಡಿದೆ. ಈ ಸಮಸ್ಯೆಗಳ ಹೊರತಾಗಿಯೂ ಸಮಾಜದಲ್ಲಿ ಇನ್ನೂ ಅನೇಕ ಸಮಸ್ಯೆಗಳಿವೆ. ಅವುಗಳ ಕುರಿತಾಗಿಯೂ ಅನೇಕ ಕವನಗಳೂ ಬಂದರೂ ಪ್ರಸ್ತುತ ಲೇಖನವನ್ನು ಪ್ರಕೃತಿ ವಿನಾಶ ಮತ್ತು ಯುದ್ಧಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ರಕ್ತ, ಕ್ರಾಂತಿ ಯುದ್ಧ ಇವುಗಳನ್ನು ಹೊರತು ಪಡಿಸಿ ಅನೇಕ ಆರೋಗ್ಯಕರ,

ಆಹ್ಲಾದತೆಯ ವಾತಾವರಣದ ಕುರಿತಾಗಿಯೂ ಕಾವ್ಯ ಸೃಷ್ಟಿಸುವ ಅವಶ್ಯಕತೆ ಇದೆ. ಕವಿಯು ಕೇವಲ ಸಾಮಾಜಿಕ ಕಳಕಳಿಯ ಬಗೆಗೆ ಮಾತ್ರ ಬರೆಯಬೇಕೆಂದೇನೂ ಇಲ್ಲ. ಆತ ಪ್ರೇಮವನ್ನೂ ಅರಿತವನಾಗಿರುತ್ತಾನೆ. ಪ್ರೀತಿ ಸರ್ವವ್ಯಾಪಿ, ಸ್ಪಷ್ಟ. ಪ್ರಾಣಿ, ಪಕ್ಷಿ, ಮನುಷ್ಯ ಇಡೀ ಸೌರಮಂಡಲವನ್ನೇ ಆಳುತ್ತದೆ. ಅದನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಯಾವ ಯುದ್ಧ, ರಕ್ತಪಾತ ಹಿಂಸೆ ಆಗುವುದಿಲ್ಲ. ವಿಷಾದವೆಂದರೆ ಇತ್ತೀಚಿನ ಕವಿಗಳು ಅರಿತೋ ಅರಿಯದೆಯೋ ಹಿಂಸಾತ್ಮಕ, ಸಾಮಾಜಿಕ ವಿಡಂಬನೆ, ಜಾತಿ ರಾಜಕೀಯದ ಬಗೆಗೆ ಬರೆಯುತ್ತಿದ್ದಾರೆ. ಬರೆಯ ಬಾರದೆಂದಲ್ಲ ನಾನು ಹೇಳುವುದು, ಒಬ್ಬ ಕವಿ ಸಂವೇದನಾಶೀಲನೂ, ಸೂಕ್ಷ್ಮನೂ ಮೃದು ಹೃದಯಿಯೂ, ಮಧುರ ಭಾಷಿಗನೂ ಆಗಿದ್ದು, ಎಲ್ಲ ಭಾವ, ವಿಭಾವ, ಅನುಭಾವ, ಸಂವೇದನೆಗಳ ಬಗೆಗೂ ಬರೆಯಬೇಕು.''[10] ಎಂಬ ಕವಯತ್ರಿ ಎಚ್. ಎಸ್ ಮುಕ್ತಾಯಕ್ಕ ಅವರ ಮಾತು ಗಮನಾರ್ಹ.

**ಕೊನೆ ಟಿಪ್ಪಣಿಗಳು:**

1. ಜಿ.ಪಿ.ಬಸವರಾಜು: ಅಕ್ಷರ ಸಂಗಾತ: ಸೆಪ್ಟೆಂಬರ್–ನವೆಂಬರ್–2024/ಪುಟ: 52
2. ಜೆ.ಕಲೀಂ ಬಾಷ: ಹೊಸತು ಪತ್ರಿಕೆ: ಡಿಸೆಂಬರ್–2024: ಪುಟ 24
3. ಅಕ್ಷರ ಸಂಗಾತ: ಸಂ: ಟಿ.ಎಸ್.ಗೊರವರ: ಜೂನ್–ಆಗಸ್ಟ್ 2021 :ಪುಟ: 79
4. ಅಕ್ಷರ ಸಂಗಾತ: ಸಂ: ಟಿ.ಎಸ್.ಗೊರವರ: ಜೂನ್–ಆಗಸ್ಟ್ 2021 :ಪುಟ: 79
5. ಹೊಸತು: ಡಾ.ವಿನಯಾ ಒಕ್ಕುಂದ: ಜೂನ್–2025 ಪುಟ: 50
6. ಸವಿತಾ ನಾಗಭೂಷಣ ''ಬೇಡ ಯುದ್ಧ'': ದೇವರಿಗೆ ಹೋದೆವು: ಪುಟ: 133
7. ಬಿ.ಟಿ.ಮಂಜುನಾಥ: ಹೊಸತು ಪತ್ರಿಕೆ: ಸಂಕೋಲೆ: ಜುಲೈ–2024: ಪುಟ: 39
8. ಡಾ ವಿರೂಪಾಕ್ಷ ಬಣಕಾರ: ಜಲಯುದ್ಧ: ಹೊಸತು ಪತ್ರಿಕೆ: ಡಿಸೆಂಬರ್–2024 ಪುಟ: 33
9. ಅಮರೇಶ ನುಗಡೋಣಿ: ಜಲಯುದ್ಧ: ಹೊಸತು ಪತ್ರಿಕೆ: ಜೂನ್ 2025 :ಪುಟ: 19
10. ಎಚ್.ಎಸ್ ಮುಕ್ತಾಯಕ್ಕ: ಇತ್ತೀಚಿನ ಕಾವ್ಯ ಒಂದು ಅನಿಸಿಕೆ: ಅಕ್ಷರ ಸಂಗಾತಿ–ತ್ರೈಮಾಸಿಕ ಸಾಹಿತ್ಯಪತ್ರಿಕೆ: ಪುಟ: 60

**ಪರಾಮರ್ಶನ ಗ್ರಂಥಗಳು:**


1. ಗೊರವರ ಟಿ.ಎಸ್. (ಸಂ), (2021), ಅಕ್ಷರ ಸಂಗಾತ, ಸಂಪುಟ–01: ಸಂಚಿಕೆ–2, 2021.
2. ಗೊರವರ ಟಿ.ಎಸ್. (ಸಂ), (2024), ಅಕ್ಷರ ಸಂಗಾತ, ಸಂಪುಟ–01: ಸೆಪ್ಟೆಂಬರ್–ನವೆಂಬರ್–2024
3. ಸಿದ್ದನಗೌಡ ಪಾಟೀಲ (ಸಂ), (2024), ಹೊಸತು ಪತ್ರಿಕೆ, ಡಿಸೆಂಬರ್ 2024.
4. ಸವಿತಾ ನಾಗಭೂಷಣ, (2018), ದೇವರಿಗೆ ಹೋದೆವು, ರೂಪ ಪ್ರಕಾಶನ, ಶಿವಮೊಗ್ಗ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.